## ಕರ್ನಾಟಕ ಸರ್ಕಾರದ ನಡವಳಿಗಳು.

**ವಿಷಯ:-** ಶ್ರೀ ನರಸಿಂಗರಾವ್ ಮುತಾಲಿಕ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಶಹಾಪೂರ ಯಾದಗಿರಿ ಜಿಲ್ಲೆ, ಇವರ ವಿರುದ್ಧದ ಶಿಸ್ತು ಕ್ರಮ – ಅಂತಿಮ ಆದೇಶ.

**ಓದಲಾಗಿದೆ:** 1. ಸರ್ಕಾರದ ಕಾರಣ ಕೇಳುವ ನೋಟೀಸ್ ಸಂಖ್ಯೆ:ಗ್ರಾಅಪ 125 ವಿಸೇಬಿ 2014 ದಿ:19-01-2015

2. ಶ್ರೀ ನರಸಿಂಗರಾವ್ ಮ್ಯುತ್ತಾಲಿಕ್, ಇವರ ಲಿಖಿತ ಹೇಳಿಕೆ ದಿ:23-12 -2015

3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಯಾದಗಿರಿ ಇವರ ಪತ್ರ ಸಂಖ್ಯೆ: ಜಿಪಂಯಾ/ಉಖಾಯೋ/2014-15/761 ದಿನಾಂಕ:29-07-2015.

-------

**ಪ್ರಸ್ತಾವನೆ:**

ಶ್ರೀ ನರಸಿಂಗರಾವ್ ಮುತಾಲಿಕ್, ಇವರು ಈ ಹಿಂದೆ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಶಹಾಪೂರ ಯಾದಗಿರಿ ಜಿಲ್ಲೆ, ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಮಹಾತ್ಮಗಾಂಧಿ ನರೇಗಾ ಯೋಜನೆಯನ್ನು ಪರಿಣಾಮಕಾರಿ ಹಾಗೂ ಪಾರದರ್ಶಕತೆ ಅನುಷ್ಠಾನಗೊಳಿಸದೆ ಯೋಜನೆಯ ಕಾಮಗಾರಿಗಳಲ್ಲಿ ಅಕ್ರಮ/ ಅವ್ಯವಹಾರ/ ನ್ಯೂನ್ಯತೆ ತಡೆಗಟ್ಟುವಲ್ಲಿ ವಿಫಲರಾಗಿದ್ದಾರೆನ್ನಲಾದ ಈ ಕೆಳಕಂಡ ಕರ್ತವ್ಯಲೋಪ/ದುರ್ನಡತೆ ಆರೋಪಗಳಿಗೆ ಸಂಬಂಧಿಸಿದಂತೆ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 12(1) (ಎ) ರಡಿಯಲ್ಲಿ ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ದಿನಾಂಕ: 19-01-2015 ರಂದು ಕಾರಣ ಕೇಳುವ ನೋಟೀಸಿನೊಂದಿಗೆ ದೋಷಾರೋಪಣಾ ಪಟ್ಟಿಯನ್ನು ಜಾರಿ ಮಾಡಲಾಗಿತ್ತು.

1) ಮಹಾತ್ಮಗಾಂಧಿ ನರೇಗಾ ಅಧಿನಿಯಮ 15 ರ ಪ್ರಕಾರ ಯೋಜನೆಯ ಕಾರ್ಯಕ್ರಮ ಅಧಿಕಾರಿಯಾಗಿ ಶ್ರೀ ನರಸಿಂಗರಾವ್ ಮುತಾಲಿಕ್ ರವರು ಅನುಷ್ಠಾನದ ಶಾಸನಬದ್ಧ ಜವಾಬ್ದಾರಿ ಹೊಂದಿದವರಾಗಿದ್ದು, ವಿಶೇಷ ಸಾಮಾಜಿಕ ಪರಿಶೋಧನೆ 2013-14 ರ ವರದಿ ಪ್ರಕಾರ ತಾಲೂಕಿನ 15 ಗ್ರಾಮ ಪಂಚಾಯತಿಗಳಿಂದ ಒಟ್ಟಾರೆ ನ್ಯೂನ್ಯತೆಗಳ ಮೊತ್ತ ರೂ. 720.52 ಲಕ್ಷಗಳು ವೆಚ್ಚ ಮಾಡಿದ ಕಾಮಗಾರಿಗಳನ್ನು ನಿಯಮ ಬಾಹಿರವಾಗಿ ಅಕ್ರಮ ಎಸಗುವ ಮೂಲಕ ದುರುಪಯೋಗ ತಡೆಗಟ್ಟುವಲ್ಲಿ ವಿಫಲರಾಗಿರುತ್ತಾರೆ.

2). 15 ಗ್ರಾಮ ಪಂಚಾಯತಿಗಳಿಂದ ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಸಹಿ ಇರದ 1464 ಎನ್.ಎಮ್.ಆರ್ ಗಳು ಮತ್ತು 92 ನಕಲಿ/ ಅನುಮಾನಸ್ಪದ ಎನ್.ಎಮ್.ಆರ್ ಗಳಿಂದ ಒಟ್ಟು ರೂ.630.97 ಲಕ್ಷಗಳ ನ್ಯೂನ್ಯತೆ/ ಅವ್ಯವಹಾರ ಮೊತ್ತ ಪಾವತಿಯನ್ನು ತಡೆಗಟ್ಟುವಲ್ಲಿ ವಿಫಲರಾಗಿರುತ್ತಾರೆ.

3). 15 ಗ್ರಾಮ ಪಂಚಾಯತಿಗಳಿಂದ ಮಹಾತ್ಮಗಾಂಧಿ ನರೇಗಾ ಯೋಜನೆಯ ಕಾಮಗಾರಿಗಳಲ್ಲಿ ಬಿಲ್ಲು ಇಲ್ಲದೆ ಸಾಮಾಗ್ರಿ ವೆಚ್ಚ ಪಾವತಿಸಿರುವ ಮೊತ್ತ ರೂ.26.45 ಲಕ್ಷ ಹಾಗೂ ಕಾಮಗಾರಿ

ನಿರ್ವಹಿಸದೇ ರೂ. 7.98 ಲಕ್ಷ ಮೊತ್ತದ ಅವ್ಯವಹಾರ/ಅಕ್ರಮ ತಡೆಗಟ್ಟುವಲ್ಲಿ ವಿಫಲರಾಗಿರುತ್ತಾರೆ.

4). 15 ಗ್ರಾಮ ಪಂಚಾಯತಿಗಳಿಂದ ಮಹಾತ್ಮಗಾಂಧಿ ನರೇಗಾ ಯೋಜನೆಯ ಕಾಮಗಾರಿಗಳಲ್ಲಿ ಅವಕಾಶವಿಲ್ಲದ ಕಾಮಗಾರಿಗಳಿಗೆ ರೂ. 25.67 ಲಕ್ಷ ಮತ್ತು ಗುತ್ತಿಗೆ/ ಯಂತ್ರಗಳಿಂದ ನಿರ್ವಹಿಸಿದ ಕಾಮಗಾರಿಗಳ ಮೊತ್ತ ರೂ.25.17 ಲಕ್ಷ ಹಾಗೂ ಹೆಚ್ಚಿನ ಅಳತೆಗೆ ಪಾವತಿಸಿರುವ ಮೊತ್ತ ರೂ.4.29 ಲಕ್ಷ ಪಾವತಿಸಿ ಅವ್ಯವಹಾರ/ಅಕ್ರಮ/ನೂನ್ಯತೆ ತಡೆಗಟ್ಟುವಲ್ಲಿ ವಿಫಲರಾಗಿರುತ್ತಾರೆ.

5). ಪ್ರತಿ ತಿಂಗಳು ಕನಿಷ್ಠ 10 ಗ್ರಾಮ ಪಂಚಾಯತಿಗಳಿಗೆ ಭೇಟಿ ನೀಡಿ, ಭೇಟಿಯ ಟಿಪ್ಪಣೆಯನ್ನು ನೀಡುವಲ್ಲಿ ಮತ್ತು ಪ್ರತಿವಾರವು ನಡೆಸುವ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಪರಿಶೀಲನಾ ಸಭೆಯಲ್ಲಿ e-NMR ಪಾವತಿ ಹಾಗೂ ಮೇಲು ಸಹಿಯ ನೈಜತೆ ಬಗ್ಗೆ ಕುಲಂಕೂಷವಾಗಿ ಪರಿಶೀಲಿಸಲು ಮತ್ತು ಅದರಲ್ಲಿಯ ಕಾಮಗಾರಿಯ ಇಂಜಿನೀಯರ ರವರ ಮೇಲು ಸಹಿಯ ಸತ್ಯಾಸತ್ಯತೆಯನ್ನು ಪರಿಶೀಲಿಸಿ ದೃಢೀಕರಿಸುವಲ್ಲಿ ನೀವು ವಿಫಲರಾಗಿರುತ್ತೀರಿ. ಅದೇ ರೀತಿ ಸಾಮಗ್ರಿ ವೆಚ್ಚ ಪಾವತಿ ಹಾಗೂ ಹಾಜರಾತಿ ಪಟ್ಟಿಯನ್ನು ತಪಶೀಲನೆ ಮಾಡಿ ಅದರ ಸತ್ಯಾಸತ್ಯತೆಯ ಬಗ್ಗೆ ದೃಢೀಕರಿಸಿ ಸಹಿ ಮಾಡುವುದರಲ್ಲಿ ಅವರು ವಿಫಲರಾಗಿರುವುದರಿಂದ, ತಾಲೂಕಿನಲ್ಲಿ ಮಹತ್ಮಾಗಾಂಧಿ ನರೇಗಾ ಯೋಜನೆಯಡಿ ಬಹಳಷ್ಟು ಅಕ್ರಮಗಳನ್ನು ಎಸಗಿದ್ದು, ಹಣ ದುರುಪಯೋಗಕ್ಕೆ ಕಾರಣರಾಗಿರುತ್ತಾರೆ.

ಮೇಲೆ ತಿಳಿಸಿರುವ ಅಂಶಗಳಿಗೆ ಅನುಪಾಲನಾ ಕ್ರಮ ವಹಿಸುವಲ್ಲಿ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಯವರಾದ ಇವರು ಕೇಂದ್ರ ಶಾಸನದ ಅಧಿನಿಯಮದ ಪ್ರಕಾರ ಯೋಜನೆಯ ಕಾರ್ಯಕ್ರಮ ಅಧಿಕಾರಿಯಾಗಿ ಅವರ ಜವಾಬ್ದಾರಿ/ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಸಂಪೂರ್ಣವಾಗಿ ವಿಫಲರಾಗಿ, ನ್ಯೂನ್ಯತೆ/ ಅವ್ಯವಹಾರಗಳಿಗೆ ಕಾರಣರಾಗಿ, ಕರ್ತವ್ಯ ಲೋಪವೆಸಗಿ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ ನಿಯಮ 3(1), ಮತ್ತು 3(2), ನ್ನು ಉಲ್ಲಂಘಿಸಿರುತ್ತಾರೆ.

ಮೇಲೆ ಕ್ರಮಸಂಖ್ಯೆ: (2)ರಲ್ಲಿ ಓದಲಾದ ದಿನಾಂಕ: ದಿನಾಂಕ 23-12 -2015ರ ಪತ್ರದಲ್ಲಿ ಸದರಿ ನೋಟೀಸಿಗೆ ಶ್ರೀ ನರಸಿಂಗರಾವ್ ಮುತಾಲಿಕ್, ಇವರು ಈ ಕೆಳಕಂಡಂತೆ ಲಿಖಿತ ರಕ್ಷಣಾ ಹೇಳಿಕೆಗಳನ್ನು ಸಲ್ಲಿಸಿರುತ್ತಾರೆ.

1) ತಾವು ಶಹಪುರ ತಾ.ಪಂ.ಯಲ್ಲಿ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಅಲ್ಪ ಅವಧಿಯಲ್ಲಿ ಕಾರ್ಯನಿರ್ವಹಿಸಿದ್ದು, ಈ ತಾಲ್ಲೂಕಿನ ಪ್ರತಿಯೊಂದು ಗ್ರಾಮಪಂಚಾಯತಿಗೆ ಬೇಟಿ ನೀಡಿರುವುದಾಗಿ, ಸದರಿ ಯೋಜನೆಯ ಅನುಷ್ಠಾನದಲ್ಲಿ ನೇರವಾಗಿ ಗ್ರಾಮ ಪಂಚಾಯತಿ ಪಿ.ಡಿ.ಓ.ಗಳು ನಿರ್ವಹಿಸುತ್ತಿದ್ದು, ಯೋಜನೆಯ ಅನುಷ್ಠಾನದಲ್ಲಿ ಉಂಟಾದ ನ್ಯೂನತೆಗಳ ಬಗ್ಗೆ ಪರಿಶೀಲಿಸಿ ವರದಿ ಮಾಡಿರುವುದಾಗಿ ತಿಳಿಸಿರುತ್ತಾರೆ.

2) ನರೇಗಾ ಯೋಜನೆಯಡಿ ಇ-ಎಫ್ ಎಮ್‌ಎಸ್‌ಮುಖಾಂತರ ಗ್ರಾಮ ಪಂಚಾಯತಿ ಗಳಿಂದ ನೇರವಾಗಿ ಕೂಲಿಕಾರರ ಖಾತೆಗಳಿಗೆ ಹಣ ಪಾವತಿಯಾಗುತ್ತಿದ್ದು, ಈ ಯೋಜನೆಯ ಅನುಷ್ಠಾನದಲ್ಲಿ ಪಾತ್ರ ಹಂತ ಹಂತವಾಗಿ ಹಲವಾರು ಅಧಿಕಾಗಳ ಜವಾಬ್ದಾರಿ ಇರುತ್ತದೆ.

ಪ್ರತಿಯೊಂದು ಗ್ರಾಮ ಪಂಚಾಯತಿಗೆ ತಾಲ್ಲೂಕು ಮಟ್ಟದ ನೋಡಲ್ ಅಧಿಕಾರಿಗಳನ್ನು ನೇಮಿಸಲಾಗಿದೆಂದು, ಸಂಬಂಧಪಟ್ಟ ತಾಲ್ಲೂಕು ಮಟ್ಟದ ಅಧಿಕಾರಿಗಳು ಎಲ್ಲಾ ಕಾಮಗಾರಿಗಳನ್ನು ಪರಿಶೀಲನೆ ಮಾಡಿ ಚೆಕ್ ಮೆಜರ್‌ಮೆಂಟ್ ಹಾಕಿ ಕಡತಗಳನ್ನು ಪರಿಶೀಲನೆ ಮಾಡಿರುತ್ತಾರೆ.

3) ನರೇಗಾ ಯೋಜನೆಯಡಿ ಕಾಮಗಾರಿಗಳ ಅಳತೆಯನ್ನು ನಮೂದಿಸುವ ಜವಾಬ್ದಾರಿಯನ್ನು ಸಂಬಂಧಪಟ್ಟ ಗ್ರಾಮ ಪಂಚಾಯತ್ ಇಂಜಿನಿಯರ್ - ಹೊಂದಿರುತ್ತಾರೆ. ತಾಲ್ಲೂಕು ಮಟ್ಟದ ಅಧಿಕಾರಿಗಳು ಸಹಾ ಎಂ.ಬಿ. ಪುಸ್ತಕದಲ್ಲಿ ಚೆಕ್ ಮೆಜರ್‌ಮೆಂಟ್ ಮಾಡಿದ ನಂತರವೇ ಎಂಐಎಸ್ ನಲ್ಲಿ ದಾಖಲಿಸಲಾಗಿರುತ್ತದೆ.

4) ನರೇಗಾ ಯೋಜನೆಯಡಿ ಕಾಮಗಾರಿಗಳಿಗೆ ಬಿಲ್ಲು ಇಲ್ಲದೆ ಸಾಮಾಗ್ರಿ ವೆಚ್ಚ ಪಾವ ತಿಸಿರುವುದು ತಮ್ಮ ಗಮನಕ್ಕೆ ಬಂದಿ ರುವುದಿಲ್ಲವೆಂದು, ಕಾಮಗಾರಿಗಳ ಅಳತೆಯನ್ನು ನಮೂದಿಸುವ ಜವಾಬ್ದಾರಿಯನ್ನು ಸಂಬಂಧ ಪಟ್ಟಗ್ರಾಮಪಂಚಾಯತ್ ಇಂಜಿನಿಯರ್ ಹೊಂದಿರುತ್ತಾರೆ. ತಾಲ್ಲೂಕು ಮಟ್ಟದ ಅಧಿಕಾರಿಗಳು ಸಹಾ ಎಂ.ಬಿ. ಪುಸ್ತಕದಲ್ಲಿ ಚೆಕ್ ಮೆಜರ್ ಮೆಂಟ್ ಮಾಡಿದ ನಂತರವೇ ಎಂಐಎಸ್ ನಲ್ಲಿ ದಾಖಲಿಸಲಾಗಿರುತ್ತದೆ. ಈ ಕಾರ್ಯಕ್ರಮದ ಅನುಷ್ಠಾನದಲ್ಲಿ ಹಲವಾರು ಅಧಿಕಾರಿಗಳ ಜವಾಬ್ದಾರಿಯಿದ್ದು, ಕೇವಲ ಕಾರ್ಯನಿರ್ವಾಹಕ ಅಧಿಕಾರಿರವರು ಮಾತ್ರ ಏಕಾಂಗಿಯಾಗಿ ಎಲ್ಲಾ ಪಂಚಾಯತಿಗಳ ಅಕ್ರಮವನ್ನು ತಡಗಟ್ಟಲು ಸಾಧ್ಯವಾಗುವುದಿಲ್ಲ.

5) ತಾವು ಕಾರ್ಯನಿರ್ವಾಹಕ ಅಧಿಕಾರಿಯಾಗಿ ಶಹಾಪೂರ್ ತಾಲ್ಲೂಕು ಪಂಚಾಯತಿಯಲ್ಲಿ ಕರ್ತವ್ಯ ನಿರ್ವಹಿಸಿದ ಅವಧಿಯಲ್ಲಿ ಶಕ್ತಿ ಮೀರಿ ಭೇಟಿ ನೀಡಿರುವುದಾಗಿ, ಹಾಗೂ ಯೋಜನೆಯ ಸಮರ್ಪಕ ಅನುಷ್ಠಾನದ ಕುರಿತು ಎಲ್ಲಾ ಪಿಡಿಒಗಳ ಪರಿಶೀಲನಾ ಸಭೆಯನ್ನು ಜರುಗಿಸಿರುವುದಾಗಿ, ಕೆಲವೊಂದು ಗ್ರಾಮ ಪಂಚಾಯತಿಗಳಲ್ಲಿ ಯೋಜನೆಯ ಅನುಷ್ಠಾನದಲ್ಲಿ ಉಂಟಾದ ಲೋಪದೋಷಗಳ ಬಗ್ಗೆ ತಕ್ಷಣವೇ ಮೇಲಾಧಿಕಾರಿಗಳಾದ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಯಾದಗಿರಿ ರವರಿಗೆ ವರದಿ ಮಾಡಿರುವುದಾಗಿ ತಿಳಿಸಿರುತ್ತಾರೆ.

6) ಮುಖ್ಯವಾಗಿ ಮನರೇಗಾ ಯೋಜನೆಯ ಅನುಷ್ಟಾನವು ಗ್ರಾ.ಪಂ.ಮಟ್ಟದಲ್ಲಿ ಆಗುತ್ತಿದ್ದು, ಗ್ರಾ.ಪಂಗಳು ಮೂಲ ತಳಹದಿ ಆಗಿರುತ್ತದೆ. ಕಾನಿಅರವರು ಎಲ್ಲಾ ಗ್ರಾ.ಪಂಗಳ ಎಲ್ಲಾ ಕಾಮಕಾರಿಗಳನ್ನು ವಿವರವಾಗಿ ಪರಿಶೀಲಿಸುವುದು ಕಷ್ಟಸಾದ್ಯವಾದ ಕೆಲಸ. ಸದರಿ ಯೋಜನೆಯ ಅನುಷ್ಠಾನವನ್ನು ತಾಲ್ಲೂಕು ಮಟ್ಟದ ಹಲವಾರು ಅಧಿಕಾರಿಗಳ ಸಹಯೋಗದೊಂದಿಗೆ ಅನುಷ್ಠಾನಗೊಳಿಸಲಾಗುತ್ತದೆ. ಯೋಜನೆಯ ಎಲ್ಲಾ ಲೋಪಗಳಿಗೆ ಕೇವಲ ಕಾರ್ಯನಿರ್ವಾಹಕ ಅಧಿಕಾರಿರವರನ್ನು ಮಾತ್ರ ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಗಮನಕ್ಕೆ ತರುತ್ತಾ, ಸದರಿ ಯೋಜನೆಯಲ್ಲಿ ಇಡೀ ರಾಜ್ಯದ ವ್ಯಾಪ್ತಿಯಲ್ಲಿ ಲೋಪಗಳು ಆಗಿದ್ದು, ಕೇವಲ ತಮ್ಮನ್ನು ಮಾತ್ರ ಹೊಣೆಗಾರರನ್ನಾಗಿ ಮಾಡಿ ರಜೆಯ ಮೇಲೆ ಇರುವ ಅವಧಿಯಲ್ಲಿ ತಮ್ಮ ವಿವರಣೆ ಸಲ್ಲಿಸಲು ಅವಕಾಶವನ್ನು ಸಹಾ ನೀಡದೇ ಸೇವೆಯಿಂದ ಅಮಾನತ್ತುಗೊಳಿಸಲಾಗಿದೆ. ಅದ್ದರಿಂದ ತಮ್ಮ ವಿವರಣೆಯನ್ನು ಪರಿಗಣಿಸಿ, ತಮ್ಮ ಮೇಲೆ ಮಾಡಿರುವ ಆರೋಪಗಳಿಂದ ದೋಷಮುಕ್ತಗೊಳಿಸಲು ಕೋರಿರುತ್ತಾರೆ.

ದಿನಾಂಕ 19-01-2015ರ ನೋಟೀಸಿಗೆ ಅಪಾದಿತರು ಸಲ್ಲಿಸಿರುವ ಲಿಖಿತ ರಕ್ಷಣಾ ಹೇಳಿಕೆಗಳ ಬಗ್ಗೆ ಮೇಲೆ ಓದಲಾದ ಕ್ರಮ ಸಂಖ್ಯೆ: (3) ರಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಯಾದಗಿರಿ ಇವರ ಅಭಿಪ್ರಾಯವನ್ನು ಪಡೆಯಲಾಗಿದ್ದು,

ಶ್ರೀ ನರಸಿಂಹರಾವ್ ಮುತಾಲಿಕ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಶಹಪುರ, ಇವರು ತಮ್ಮ ಕಾರ್ಯ ಅವಧಿಯಲ್ಲಿ ಎಂಜಿಎನ್ಆರ್ಇಜಿಎ ಯೋಜನೆಯ ಅನುಷ್ಠಾನದಲ್ಲಿ ಕ್ರಮವಹಿಸಿರುತ್ತಾರೆಂದು, ಅವರ ಲಿಖಿತ ಹೇಳಿಕೆಯಲ್ಲಿ ವಿವರಣೆಯನ್ನು ಒಪ್ಪಬಹುದಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಆಪಾದಿತರ ವಿರುದ್ಧದ ಆರೋಪಗಳು ಮತ್ತು ಅವರು ಸಲ್ಲಿಸಿರುವ ಲಿಖಿತ ರಕ್ಷಣಾ ಹೇಳಿಕೆಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಯಾದಗಿರಿ ಇವರ ಅಭಿಪ್ರಾಯವನ್ನು ಕೂಲಂಕಷವಾಗಿ ಪರಿಶೀಲಿಸಿ, ಸದರಿಯವರು ಎಸಗಿರುವ ಲೋಪಕ್ಕೆ ಅನುಗುಣವಾಗಿ ದಂಡನೆಯನ್ನು ವಿಧಿಸಲು ತೀರ್ಮಾನಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 125 ವಿಸೇಬಿ 2014 ಬೆಂಗಳೂರು ದಿನಾಂಕ: 07-10-2015.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ ಸರ್ಕಾರವು ಶ್ರೀ ನರಸಿಂಗರಾವ್ ಮುತಾಲಿಕ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಶಹಾಪೂರ, ಯಾದಗಿರಿ ಜಿಲ್ಲೆ ಇವರಿಗೆ ದಿನಾಂಕ 19-01-2015ರ ಕಾರಣ ಕೇಳುವ ನೋಟೀಸಿನಲ್ಲಿ ಮಾಡಿರುವ ಆರೋಪಗಳಿಗೆ ಸಂಬಂಧಿಸಿದಂತೆ, **ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 8(ii)ರಡಿ ಪ್ರದತ್ತವಾದ ಅಧಿಕಾರದನ್ವಯ "ವಾಗ್ದಂಡನೆ" ವಿಧಿಸಿ, ಆದೇಶಿಸಿದೆ.**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ವಿ. ಹನುಮಂತಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇ-ಬಿ & ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ
3. ಆಯುಕ್ತರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಬೆಂಗಳೂರು
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಯಾದಗಿರಿ.
5. ಸರ್ಕಾರದ ಅಧೀನ ಕಾರ್ಯದರ್ಶಿ, ಅರಣ್ಯ,ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.
6. ಸಂಬಂಧಿಸಿದ ಅಧಿಕಾರಿಗೆ (ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಯಾದಗಿರಿ.)

ಪ್ರತಿಯನ್ನು ಮಾಹಿತಿಗಾಗಿ:

1) ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ(ಪಂ.ರಾಜ್)/ ಉಪ ಕಾರ್ಯದರ್ಶಿ (ಆಡಳಿತ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಇವರ ಆಪ್ತ ಶಾಖೆಗೆ.
2) ವಿಶೇಷಾಧಿಕಾರಿ, ಗಣಕ ಕೋಶ, ಗ್ರಾ.ಅ.ಪಂ.ರಾಜ್ ಇಲಾಖೆ.
3) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.